ಜನ ಎಲ್ಲ ಕಲೆಗಳನ್ನು ಅದ್ಭುತವಾಗಿ ಆರಾಧಿಸ್ತಾರೆ. ಕಲಾರಾಧಕರಿಗೆ, ಸಂಗೀತ ವಿದ್ವಾಂಸರಿಗೆ ಯೂರೋಪ್ ಹೇಳಿ ಮಾಡಿಸಿದಂಥ ರಾಷ್ಟ್ರ. ಯೂರೋಪಿನ ಜನರನ್ನು 'ಭಾರತೀಯ ಶಾಸ್ತ್ರೀಯ ಸಂಗೀತ ರಸಿಕರು' ಎನ್ನಬಹುದು. ಪಾಶ್ಚಾತ್ಯ ಸಂಗೀತ ಹುಟ್ಟಿದ್ದೇ ಅಲ್ಲಿ ಅಂತಲೇ ಹೇಳಬಹುದು. ಸಂಗೀತವಷ್ಟೇ ಅಲ್ಲ; ಸಾಹಿತ್ಯ, ನೃತ್ಯ, ರಂಗಭೂಮಿ, ಚಿತ್ರಕಲೆ ಸೇರಿದಂತೆ ಎಲ್ಲ ಭಾರತೀಯ ಕಲಾಪ್ರಕಾರಗಳೂ ಇಲ್ಲಿನವರಿಗೆ ಚಿರಪರಿಚಿತ. ನಮ್ಮ ಕಲೆ, ಸಂಸ್ಕೃತಿಯನ್ನು ಅಲ್ಲಿನವರು ಮೆಚ್ಚುವುದು, ಶ್ಲಾಘಿಸುವುದು, ಪ್ರೋತ್ಸಾಹಿಸುವುದು, ಆಸ್ವಾದಿಸುವುದು ನಿಜಕ್ಕೂ ಬಹಳ ಸಂತೋಷದ ವಿಚಾರ.

ನಾವು ಜರ್ಮನಿ, ಸ್ವಿಟ್ಜರ್ಲೆಂಡ್, ಫ್ರಾನ್ಸ್, ಸ್ವೀಡನ್, ಲಂಡನ್, ನೆದರ್ಲೆಂಡ್ ಮುಂತಾದ ದೇಶಗಳಿಗೆ ಹೋಗಿದ್ವಿ. ಅಲ್ಲಿ ಈಗ ಬೇಸಿಗೆ ಶುರುವಾಗುತ್ತಿದೆ. ವಾತಾವರಣವೂ ಚೆನ್ನಾಗಿದೆ. ಬಹಳಷ್ಟು ಪ್ರತಿಷ್ಠಿತ ವೇದಿಕೆಗಳಲ್ಲಿ ಕಛೇರಿ ಕೊಡುವ ಅವಕಾಶ ನಮ್ಮದಾಗಿತ್ತು. ಅಲ್ಲಿ ಎಲ್ಲ ಸಂಗೀತ ಕಛೇರಿಗಳೂ ಬಹಳ ಮುಂಚಿತವಾಗಿಯೇ ಪ್ಲಾನ್ ಆಗಿರುತ್ತವೆ. ದೊಡ್ಡ ದೊಡ್ಡ ಆಡಿಟೋರಿಯಂ, ಚರ್ಚ್‌ಗಳು, ವಿಶ್ವವಿದ್ಯಾಲಯಗಳ ಸಭಾಂಗಣಗಳಲ್ಲಿ ಕಛೇರಿ ನಡೀತು. ನಮ್ಮ ಸಂಗೀತದ ವೈಭವವನ್ನು ಅವರು ಕೊಂಡಾಡಿದ್ದು ಬಹಳ ಸಂತೋಷ.

ವಯೊಲಿನ್ ಅವರದೇ ವಾದ್ಯ. ಇದರಲ್ಲಿ ಹೊರಹೊಮ್ಮುವ ಗಮಕಗಳು ರಾಗಾಲಾಪ, ರಾಗ ವಿಸ್ತಾರ, ಮನೋಧರ್ಮ, ಭಾವ ಎಲ್ಲವನ್ನೂ ವಯೊಲಿನ್‌ನಲ್ಲಿ ಆಸ್ವಾದಿಸುವುದಕ್ಕೆ ತುಂಬ ಉತ್ಸುಕರಾಗಿರುತ್ತಾರೆ. ನಮ್ಮ ದೊಡ್ಡ ಅಭಿಮಾನಿಗಳ ಬಳಗವೇ ಅಲ್ಲಿದೆ. ಬೇರೆ ಪಕ್ಕದ ದೇಶಗಳಿಂದಲೂ ಬಂದು ಕೇಳ್ತಾರೆ. ಕನ್ಸರ್ವೇಟರಿಗಳು (ಶಾಸ್ತ್ರೋಕ್ತವಾಗಿ ಸಂಗೀತ ಕಲಿಸುವ ಕಲಾಶಾಲೆಗಳು) ಅಲ್ಲಿದ್ದು ಕಛೇರಿಗಳನ್ನು ವ್ಯವಸ್ಥಿತವಾಗಿ ಆಯೋಜನೆ ಮಾಡುತ್ತಾರೆ.

ನೆದರ್ಲೆಂಡ್‌ನಲ್ಲಿ 'ಹೆಚ್‌ಕೆಯು' ಎಂಬ



ಮೈಸೂರು ಮಂಜುನಾಥ್

ವಿಶ್ವವಿದ್ಯಾಲಯ ಇದೆ. ಅಲ್ಲಿ ಪ್ರತಿವರ್ಷ 'ಐಆರ್‌ಸಿ' ಎಂಬ ಸಂಗೀತ ಕಾರ್ಯಾಗಾರ ನಡೆಯುತ್ತದೆ. ನಾವೂ ಪ್ರತಿವರ್ಷ ಹೋಗ್ತಾ ಇದ್ದೀವಿ. ವರ್ಕ್‌ಶಾಪ್ ಮಾಡ್ತೀವಿ. ಇಲ್ಲಿ ಪಾಶ್ಚಾತ್ಯ, ಜಾಸ್ ಸಂಗೀತ ವಿದ್ವಾಂಸರು ಭಾಗವಹಿಸ್ತಾರೆ. ಒಂದು ದೇಶದಲ್ಲಿ ಕಛೇರಿ ಇದ್ದರೆ ಅಕ್ಕಪಕ್ಕದ ದೇಶದ ಅಭಿಮಾನಿಗಳು ಬರುತ್ತಾರೆ. ಅಲ್ಲಿ ಪ್ರೊ. ನೆಡ್ ಮ್ಯಾಕ್‌ಗೊವನ್ ಎಂಬವರು ಬಹು ಖ್ಯಾತಿಯ ಕೊಳಲುವಾದಕರು. ವಿವಿ ಸಂಗೀತ ವಿಭಾಗದ ಮುಖ್ಯಸ್ಥರು, ದೊಡ್ಡ ಪಾಶ್ಚಾತ್ಯ ಸಂಗೀತಗಾರರು ಕಾರ್ಯಕ್ರಮವನ್ನು ಸೊಗಸಾಗಿ ಆಯೋಜಿಸುತ್ತಾರೆ. ನಾವೆಲ್ಲ ಸೇರಿ ಅಲ್ಲಿ ಫ್ಯೂಷನ್ ಸಂಗೀತ ನಡೆಸಿಕೊಟ್ವಿ. ಇಲ್ಲಿನ ಶಿಕ್ಷಣ ವ್ಯವಸ್ಥೆಗೆ ಸಂಗೀತ ಪೂರಕ ಎಂಬುದನ್ನು ಇಂತಹ ಕಛೇರಿಗಳು ಸಾಬೀತುಪಡಿಸುತ್ತವೆ. ಭಾರತೀಯ ಸಂಗೀತ ವಿಶ್ವದಾದ್ಯಂತ ಪ್ರಸಾರ ಆಗೋದಕ್ಕೆ ಇದೂ ಕಾರಣ.

ಭಾರತೀಯರ ಮುಂದೆ ನುಡಿಸುವುದಕ್ಕೂ ಯೂರೋಪಿಯನ್ನರ ಮುಂದೆ ನುಡಿಸುವುದಕ್ಕೂ ವ್ಯತ್ಯಾಸ ಇದೆ. ನಮ್ಮ ಸಂಗೀತ ಅವರಿಗೆ ಖುಷಿ ಆಗುವ ಹಾಗೆ, ಅರ್ಥ ಆಗುವ ಹಾಗೆ ನುಡಿಸುವುದು ದೊಡ್ಡ ಜವಾಬ್ದಾರಿ. ಭಾರತೀಯ ಸಂಗೀತ ಇಷ್ಟೊಂದು ಅದ್ಭುತವಾಗಿದೆಯಾ ಎಂದು ಅವರು ಮೂಗಿನ ಮೇಲೆ ಬೆರಳಿಡುವ ಹಾಗೆ ಪ್ರತಿಕ್ರಿಯೆ ನೀಡುತ್ತಾರೆ. ಕಛೇರಿ ಮುಗಿದಾಗ ಎಲ್ಲರೂ ಸ್ಟ್ಯಾಂಡಿಂಗ್ ಒವೇಶನ್ ನೀಡುವುದು ನಮಗೆ ತುಂಬ ಖುಷಿಕೊಡುತ್ತೆ.

ಸಂಗೀತ ಧರ್ಮಾತೀತವಾದದ್ದು. ಆ ಶಕ್ತಿ ಇರುವುದು ಸಂಗೀತಕ್ಕೆ ಮಾತ್ರ. ಅಲ್ಲಿನ ಸಾವಿರಾರು ವರ್ಷ ಹಳೆಯದಾದ ಪ್ರತಿಷ್ಠಿತ ಚರ್ಚ್ ಒಳಗೆ ಕುಳಿತು ತ್ಯಾಗರಾಜರ, ಪುರಂದರದಾಸರ ಕೃತಿಗಳನ್ನು ನುಡಿಸಿದ್ವಿ. ಆ ಸಭಾಂಗಣದಲ್ಲಿ ಕೇಳುಗರು ಕಿಕ್ಕಿರಿದು ತುಂಬಿದ್ದರು.

## ನೆಲ ಹೊತ್ತಿ ಉರಿದೊಡೆ...

ಸಂಗೀತದ್ದು ಮಹಾನ್ ಶಕ್ತಿ. ಚಳಿಯಲ್ಲಿ ಕಚಗುಳಿ ಇಡುತ್ತದೆ, ಮಳೆಯಲ್ಲಿ ಸಂಗೀತ ಸುರಿಮಳೆ ಸುರಿಸುತ್ತದೆ. ಬೇಸಿಗೆಯಲ್ಲಿ ತಂಪಿನ ಸಿಂಚನ ನೀಡುತ್ತದೆ. ಬೆಂಕಿ ಹೊತ್ತಿ ಉರಿದರೂ ಸಂಗೀತ ತಣ್ಣನೆಯ ಅನುಭವ ನೀಡುತ್ತದೆ. ಈಚೆಗೆ ಪ್ಯಾರಿಸ್‌ನಲ್ಲಿ ನಡೆದದ್ದೂ ಇದೇ ಕಥೆ. ಆಗಂತುಕನ ಹಠಾತ್ ದಾಳಿಯಿಂದ ಇಡೀ ಪ್ಯಾರಿಸ್‌ನಲ್ಲಿ ಟೆನ್ಶನ್.

ಅಂದು ಜುಲೈ 2. ಪ್ಯಾರಿಸ್‌ನ ವಿಶ್ವವಿದ್ಯಾನಿಲಯದಲ್ಲಿ ಕಛೇರಿ ಇದ್ದದ್ದು. ಇದಕ್ಕಿಂತ ಎರಡು ದಿನ ಮೊದಲು ಅಲ್ಲಿ ಗಲಭೆ ಆದದ್ದು. ಪ್ಯಾರಿಸ್ ತುಂಬ ಬೆಂಕಿ. ಜರ್ಮನಿಯಿಂದ ಪ್ಯಾರಿಸ್‌ಗೆ ವಿಮಾನದಲ್ಲಿ ಬರಬೇಕಿತ್ತು. ಆದರೆ ನಮ್ಮ ಅಭಿಮಾನಿಗಳು, ಭಾರತೀಯ ಸ್ನೇಹಿತರ ಬಳಗ ಎಲ್ಲರೂ ಮೆಸೇಜ್ ಮಾಡಿ, ಸಂದೇಶ ಕಳಿಸಿ 'ಹುಷಾರಾಗಿರಿ, ಅಲ್ಲಿಗೆ ಹೋಗ್ಬೇಡಿ' ಎಂದೆಲ್ಲ ಹೇಳಿದ್ರು. ಸಂಘಟಕರು ಮಾತ್ರ 'ಈ ಕಛೇರಿ ನಡೆಯಲೇ ಬೇಕು. ಟಿಕೆಟ್ ಎಲ್ಲ ಸೋಲ್ಡ್‌ಔಟ್ ಆಗಿದೆ. ಕೇಳುಗರು ಬಹಳ ಉತ್ಸಾಹದಲ್ಲಿದ್ದಾರೆ' ಅಂದ್ರು. ನಾವು ದೇವರ ಮೇಲೆ ಭಾರ ಹಾಕಿ ಧೈರ್ಯವಾಗಿ ಹೋದ್ವಿ. ಹೋಗಿ ನೋಡಿದ್ರೆ ಜಾಮ್‌ಪ್ಯಾಕ್ ಸಭಾಂಗಣ. ಕಛೇರಿ ಅತ್ಯಂತ ಯಶಸ್ವಿಯಾಯ್ತು. ನಾನು ಸುಮಂತ್ ಪಿಟೀಲು ನುಡಿಸಿದ್ವಿ. ಬಿ.ಸಿ. ಮಂಜುನಾಥ್ ಮೃದಂಗದಲ್ಲಿ ಸಹಕರಿಸಿದ್ರು. 'ಹೊರಗೆ ಬೆಂಕಿ ಹತ್ತಿ ಉರಿಯುತ್ತಿದ್ದರೂ ನಮ್ಮ ಮನಸ್ಸಿಗೆ , ಹೃದಯಕ್ಕೆ ತಂಪು ಮಳೆಯನ್ನು ಸುರಿಸಿದ್ರಿ' ಎಂದು ಎಲ್ಲರೂ ಕೊಂಡಾಡಿದ್ರು. ಇದು ಸಂಗೀತಕ್ಕಿರುವ ಶಕ್ತಿ.

ಇನ್ನೂ ಒಂದು ರೋಚಕ ಘಟನೆ ಸ್ವಿಟ್ಜರ್ಲೆಂಡ್‌ನಲ್ಲಿ ನಡೆಯಿತು. ನಾವು ನೆದರ್ಲೆಂಡ್ ಸಂಗೀತ ಪ್ರವಾಸ ಮುಗಿಸಿ ಸ್ವಿಟ್ಜರ್ಲೆಂಡಿಗೆ ಹೋಗಬೇಕಾಗಿತ್ತು. ವಿಮಾನದಲ್ಲಿ ಪ್ರಯಾಣ ಮಾಡಿದ ನಂತರ ರೈಲಿನಲ್ಲೂ ಕೊಂಚ ದೂರ ಹೋಗಬೇಕಿತ್ತು. ಆದರೆ ನಮ್ಮ ವಿಮಾನ ಮಿಸ್ ಆಗಿ ನಾವು ಪ್ರಯಾಣ ಆರಂಭಿಸುವಾಗ ಒಂದು ಗಂಟೆ ತಡವಾಯಿತು. ಅಲ್ಲಿ ಹೋಗಿ ಇಳಿದಾಗ ಅಭಿಮಾನಿಗಳು ರೈಲು ನಿಲ್ದಾಣಕ್ಕೆ ಬಂದು ನಮ್ಮನ್ನು ಸ್ವಾಗತಿಸಿದರು. ನಿಗದಿತ ಸಮಯಕ್ಕಿಂತ ಎರಡೂವರೆ ಗಂಟೆ ತಡವಾಗಿ ಹೋದರೂ ಎಲ್ಲ ಕೇಳುಗರು ನಮಗಾಗಿ ಕಾಯುತ್ತಾ ಕುಳಿತಿದ್ದರು. ಇದು ನಮಗೆ ತುಂಬ ಖುಷಿ ಕೊಡ್ತು. ಸಂಗೀತ ಹೃದಯದ ಭಾಷೆ. ಸುನಾದದ ಮುಂದೆ ಬೇರೆಲ್ಲವೂ ಗೌಣವೇ. ■



ಪ್ಯಾರಿಸ್‌ನಲ್ಲಿ ನಡೆದ ಸಂಗೀತ ಕಛೇರಿಯಲ್ಲಿ ಮೈಸೂರು ಮಂಜುನಾಥ್, ಸುಮಂತ್ ಹಾಗೂ ಬಿ.ಸಿ. ಮಂಜುನಾಥ್